# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2019-20/2275-84

ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು.
ದಿನಾಂಕ: 18 APR 2020

## ಸುತ್ತೋಲೆ

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸೇವೆಯಲ್ಲಿರುವಾಗಲೇ ನಿಧನ ಹೊಂದಿರುವ ಅಧಿಕಾರಿ/ನೌಕರರ ಇಡಿಗಂಟು ಪರಿಹಾರ ಕಡತಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ34 ಪಿಇಎನ್ 2018 ದಿನಾಂಕ:23.06.2018

******

ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಅಧಿಕಾರಿ/ನೌಕರರು ಸೇವೆಯಲ್ಲಿರುವಾಗಲೇ ನಿಧನ ಹೊಂದಿದಲ್ಲಿ, ಅವರ ವಾರಸುದಾರರಿಗೆ ಅಥವಾ ನಾಮನಿರ್ದೇಶಿತರಿಗೆ ಇಡಿಗಂಟು ಸೌಲಭ್ಯವನ್ನು ನಿಗಮದ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:29.08.2011ರನ್ವಯ ನೀಡಲಾಗುತ್ತಿತ್ತು.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ34 ಪಿಇಎನ್ 2018 ದಿನಾಂಕ:23.06.2018ರಲ್ಲಿ, ದಿನಾಂಕ:01.04.2006 ರಂದು ಮತ್ತು ನಂತರ ಸರ್ಕಾರಿ ಸೇವೆಗೆ ನೇಮಕ ಹೊಂದಿರುವ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶದನ್ವಯ ದಿನಾಂಕ:31.03.2018ರ ಪೂರ್ವದಲ್ಲಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರ ವಾರಸುದಾರರಿಗೆ/ನಾಮನಿರ್ದೇಶಿತರಿಗೆ ಇಡಿಗಂಟು ಪರಿಹಾರದ ಸೌಲಭ್ಯವು ಅನ್ವಯಿಸಲಿದ್ದು, ದಿನಾಂಕ:01.04.2018 ರಂದು ಮತ್ತು ನಂತರ ನಿಧನ ಹೊಂದಿದ ಪ್ರಕರಣಗಳಿಗೆ ಅನ್ವಯಿಸಿ ಇಡಿಗಂಟು ಪರಿಹಾರದ ಸೌಲಭ್ಯವನ್ನು ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿರುತ್ತದೆ.

ಸದರಿ ಸರ್ಕಾರಿ ಆದೇಶವನ್ನು ನಿಗಮದಲ್ಲಿಯೂ ಅಳವಡಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿರುವುದರಿಂದ, ದಿನಾಂಕ:31.03.2018ರ ಒಳಗೆ ಸೇವೆಯಲ್ಲಿರುವಾಗಲೇ ನಿಧನ ಹೊಂದಿರುವ ಅಧಿಕಾರಿ/ನೌಕರರ ವಾರಸುದಾರರಿಗೆ/ನಾಮನಿರ್ದೇಶಿತರಿಗೆ ಮಾತ್ರ ಇಡಿಗಂಟು ಪರಿಹಾರವನ್ನು ಪಾವತಿಸಲಾಗುತ್ತಿದ್ದು, ದಿನಾಂಕ:01.04.2018 ರಂದು ಮತ್ತು ನಂತರ ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಅಧಿಕಾರಿ/ನೌಕರರ ಅರ್ಹ ವಾರಸುದಾರರಿಗೆ/ನಾಮ ನಿರ್ದೇಶಿತರಿಗೆ ಇಡಿಗಂಟು ಪರಿಹಾರದ ಸೌಲಭ್ಯವನ್ನು ಮಂಜೂರು ಮಾಡುತ್ತಿರುವುದಿಲ್ಲ. ಆದ್ದರಿಂದ ಅಂತಹ ಅಧಿಕಾರಿ/ನೌಕರರ ಇಡಿಗಂಟು ಪರಿಹಾರದ ಪ್ರಸ್ತಾವನೆ ಕಡತಗಳನ್ನು ಹಾಗೂ ಸೇವಾಪುಸ್ತಕ/ಇತರೆ ದಾಖಲಾತಿಗಳನ್ನು ಮಂಜೂರಾತಿಗಾಗಿ ಸಲ್ಲಿಸದಿರುವಂತೆ ಈ ಮೂಲಕ ಕೋರಿದೆ.

ಆರ್ಥಿಕ ಸಲಹೆಗಾರರು
ಎನ್‌ಡಿಸಿಪಿಎಸ್

**ಪ್ರತಿಗಳು:**

1. ಆರ್ಥಿಕ ಸಲಹೆಗಾರರು(ಲೆ&ಸಂ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ&ವಾ), ನಿಗಮ ಕಾರ್ಯಾಲಯ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು ರವರ ಮಾಹಿತಿಗಾಗಿ.
3. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಚಾವಿಸನಿನಿ, ಹಿನಕಲ್ ರಸ್ತೆ, ಮೈಸೂರು ರವರ ಮಾಹಿತಿಗಾಗಿ.
4. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಮವಿಸಕಂ, ಮಂಗಳೂರು ರವರ ಮಾಹಿತಿಗಾಗಿ.
5. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಗುವಿಸಕಂ, ಗುಲಬರ್ಗ ರವರ ಮಾಹಿತಿಗಾಗಿ.
6. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಹುವಿಸಕಂ, ನವನಗರ, ಹುಬ್ಬಳ್ಳಿ ರವರ ಮಾಹಿತಿಗಾಗಿ.
7. ಜಂಟಿ ನಿರ್ದೇಶಕರು, ಪಿಸಿಕೆಎಲ್, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ.
8. **ಅಧೀಕ್ಷಕ ಇಂಜನಿಯರ್(ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು www.kptcl.com>eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**
9. ಎಲ್ಲಾ ಲೆಕ್ಕಾಧಿಕಾರಿಗಳು/ ಕವಿಪ್ರನಿನಿ ಮತ್ತು ವಿಸಕಂನ ಲೆಕ್ಕಘಟಕಗಳು ರವರ ಮಾಹಿತಿಗಾಗಿ.
10. ವ್ಯವಸ್ಥಾಪಕರು(ಆಂ.ನಿ)/ವ್ಯವಸ್ಥಾಪಕರು(ನ&ಲೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ.